ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
# 59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ) ಬೆಂಗಳೂರು-25
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
KARNATAKA STATE POLICE HOUSING & INFRASTRUCTURE DEVELOPMENT CORPORATION LTD.
# 59, Richmond road (Gen K.S. Thimmaiah Road), Bengaluru-25.
(A Government of Karnataka Undertaking)
Ph: 080–25584102/25594893 e-mail eeqclksphc@gmail.com Website: www.ksphc.org

ಸಂಖ್ಯೆ:ಕಾ.ಇಂ/ಕ.ರಾ.ಪೊ.ವ&ಮೂ.ಸೌ.ಅ.ನಿ.ನಿ/ಗುನಿವಿ/2024–25/118 ದಿನಾಂಕ: 23.12.2024.

## :ಸುತ್ತೋಲೆ:

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು ISO 9001:2015 ಮತ್ತು 14001:2015ರ ಮಾನ್ಯತೆ ಪಡೆದಿರುವ ಸಂಸ್ಥೆಯಾಗಿರುತ್ತದೆ. ಪ್ರಸ್ತುತ ನಿಗಮದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಸತಿ, ವಸತಿಯೇತರ ಕಟ್ಟಡಗಳು ಹಾಗೂ ಇತರೆ ಮೂಲಸೌಲಭ್ಯ ಸೌಕರ್ಯಗಳನ್ನು ಕಲ್ಪಿಸುತ್ತಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆಲವು ಸುಧಾರಣೆಗಳನ್ನು ಕೈಗೊಳ್ಳುವ ಅವಶ್ಯಕತೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಹಾಗೂ ಕಾಮಗಾರಿಗಳ ಗುಣಮಟ್ಟದಲ್ಲಿ ಹೆಚ್ಚಿನ ಉನ್ನತ್ತೀಕರಣಕ್ಕಾಗಿ ಕಾಮಗಾರಿಗಳ ನಿರ್ವಹಣೆಯಲ್ಲಿ ಕೆಳಕಂಡ ಕಾರ್ಯವಿಧಾನಗಳನ್ನು ಕಟ್ಟುನಿಟ್ಟಾಗಿ ತೊಡಗಿಸಿಕೊಳ್ಳಲು ಸೂಚಿಸಲಾಗಿದೆ.

1. ಕಾಮಗಾರಿಗಳ ಗುತ್ತಿಗೆ ಕರಾರಿನನ್ವಯ ಗುಣ ಭರವಸೆ ಕಾರ್ಯಕ್ರಮ ಪಟ್ಟಿಯನ್ನು ಅನುಮೋದಿಸಿಕೊಂಡು ಅನುಮೋದಿತ ಗುಣ ಭರವಸೆ ಕಾರ್ಯಕ್ರಮ (QAP) ಪಟ್ಟಿಯಂತೆ ಪರೀಕ್ಷೆಗಳನ್ನು ಕೈಗೊಳ್ಳದಿರುವುದು ಕಂಡುಬಂದಿರುತ್ತದೆ. ಕಾಮಗಾರಿಗಳಲ್ಲಿ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲು ಗುಣ ಭರವಸೆ ಕಾರ್ಯಕ್ರಮ (QAP) ಪಟ್ಟಿಯಂತೆ ಅಗತ್ಯ ಪರೀಕ್ಷೆಗಳನ್ನು ಕೈಗೊಂಡು, ಎಲ್ಲಾ ಹಂತದಲ್ಲಿ ಗುಣಮಟ್ಟದ ಕಾಮಗಾರಿಯನ್ನು ಕೈಗೊಂಡಿರುವ ಬಗ್ಗೆ ದೃಢಿಪಡಿಸಿಕೊಳ್ಳಲು ಸೂಚಿಸಿದೆ.
2. ಕಾಮಗಾರಿಗಳ ವಿವಿಧ ಹಂತಗಳಲ್ಲಿ ಕೈಗೊಳ್ಳಲಾಗುವ (QAP ಯಂತೆ) ಪರೀಕ್ಷೆಗಳನ್ನು ಹಾಗೂ ಪರೀಕ್ಷಾ ವರದಿಗಳನ್ನು ಸಂಬಂಧಿಸಿದ ನಿಗಮದ ಅಧಿಕಾರಿಗಳು ಧೃಡೀಕರಿಸಿ, ಸಹಿಗಳೊಂದಿಗೆ ಹೆಸರು ಮತ್ತು ಪದನಾಮಗಳನ್ನು ಕಡ್ಡಾಯವಾಗಿ ನಮೂದಿಸುವುದು.
3. ಕಾಮಗಾರಿಗಳ ಕಾಂಕ್ರೀಟ್ Form Work ಗಾಗಿ ಮರದ ಪೋಲ್‌ಗಳನ್ನು ಬಳಸುತ್ತಿರುವುದು ಕಂಡುಬಂದಿದ್ದು, ಕಾಮಗಾರಿಗಳಿಗೆ ಏಕರೂಪ ದರಗಳ ಪಟ್ಟಿಯ Apendix-1ರಡಿ ಸೂಚಿಸಿರುವಂತೆ Centering/Shuttering ಸಾಮಾಗ್ರಿಗಳನ್ನು ಬಳಸುವುದು.
4. ಕಾಲಂಗಳಿಗೆ ಕಾಂಕ್ರೀಟ್‌ನ್ನು (Columns Casting) ಒಂದೇ ಬಾರಿಗೆ ಛಾವಣಿ ಬೀಮ್‌ಗಳ ತಳಮಟ್ಟದವರೆಗೆ, ಅಂದರೆ 2.70ಮೀ ವರೆಗಿನ ಎತ್ತರಕ್ಕೆ ಕೈಗೊಳ್ಳುತ್ತಿರುವುದು ಕಂಡುಬಂದಿರುತ್ತದೆ. IS-456:2000/Clause-13.2 ಮಾನದಂಡದಂತೆ ಕಾಲಂಗಳಿಗೆ ಪ್ರತಿ ಬಾರಿಗೆ 1.50ಮೀ ಎತ್ತರಕ್ಕೆ ಮೀರದಂತೆ ಕಾಂಕ್ರೀಟ್‌ನ್ನು ಕೈಗೊಳ್ಳುವುದು.

5. ಕಾಮಗಾರಿಗಳ ಸ್ಥಳಗಳಲ್ಲಿ ಸೈಟ್ ರಿಜಿಸ್ಟ್ರ ನಿರ್ವಹಿಸುವುದು ಹಾಗೂ ಸದರಿ ರಿಜಿಸ್ಟನಲ್ಲಿ ಕಾಮಗಾರಿಯ ಪ್ರಾರಂಭದಿಂದ ಮುಕ್ತಾಯದವರೆಗೆ ಕೈಗೊಳ್ಳಲಾಗುವ ಎಲ್ಲಾ ಹಂತದ ಪರೀಕ್ಷಾ ವಿವರಗಳನ್ನು ದಿನಾಂಕಗಳೊಂದಿಗೆ ನಮೂದಿಸುವುದು ಮತ್ತು ನಿಗಮದ ಮೇಲಾಧಿಕಾರಿಗಳ ಪರಿವೀಕ್ಷಣೆ ಸಮಯದಲ್ಲಿ ತಪ್ಪದೆ ಹಾಜರುಪಡಿಸತಕ್ಕದ್ದು.
6. ಕಟ್ಟಡದ ಕಿಟಕಿಗಳಿಗೆ 21/2 Track/3 Track uPVC Windows ಗಳಲ್ಲಿ, Fiber Mesh ನಿಂದ ಕೂಡಿದ Panel ಗಳನ್ನು ಅಳವಡಿಸುತ್ತಿರುವುದು ಕಂಡುಬಂದಿರುತ್ತದೆ. ಎಲ್ಲಾ uPVC Windows ಗಳಲ್ಲಿ, SS Mesh ನಿಂದ ಕೂಡಿದ Panel ಗಳನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.
7. ಕಾಮಗಾರಿಗಳ ಪ್ರಗತಿಯ ಪ್ರತೀ ಹಂತದ ಸ್ಪಷ್ಟವಾದ ಛಾಯಾ ಚಿತ್ರಗಳನ್ನು WBPMS ನಲ್ಲಿ Upload ಮಾಡುವುದು. ವಿಶೇಷವಾಗಿ ಕಟ್ಟಡಗಳ Plinth ವರೆಗಿನ ಹಂತದ ಎಲ್ಲಾ ಛಾಯಾ ಚಿತ್ರಗಳನ್ನು ತಪ್ಪದೇ Upload ಮಾಡಲು ಸೂಚಿಸಿದೆ.
8. ಕಾಮಗಾರಿಯ ಅಂತಿಮ ಬಿಲ್‌ನೊಂದಿಗೆ ಸಲ್ಲಿಸುವ ನಕ್ಷೆಗಳನ್ನು (As-Built Drawings) ಈ ಕೆಳಕಂಡ ಅಂಶಗಳನ್ನು ಒಳಗೊಂಡಂತೆ ವರದಿಯೊಂದಿಗೆ ಸಲ್ಲಿಸುವುದು.
   - Water Supply Line & Plumbing Details.
   - Sanitary Lines Details.
   - Electrical Lines (Main Lines, Distribution lines, Meter Connection lines & etc).
   - Fire Fighting Distribution line Details (If provided).
   - Grade of Concrete used in all components of the work.
   - Reinforcement Details used in all components of the work.
   - Location of the Inspection Chambers.
   - Location of the Machine Holes in respect of UGD connections.
   - Location of STP & WTP.
   - Location of Sump & Water Storage Tanks on Terrace Slab.
9. ಕಾಮಗಾರಿ ಸ್ಥಳಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಕಾರ್ಮಿಕರ ಸುರಕ್ಷತೆ ಕುರಿತು ಅಗತ್ಯ ಮುನ್ನೇಚ್ಚರಿಕೆ ಕ್ರಮಗಳನ್ನು ಪಾಲಿಸದೇ ಇರುವುದನ್ನು ಗಮನಿಸಲಾಗಿದೆ. ಕಾರ್ಮಿಕರ ಸುರಕ್ಷತೆ ಕುರಿತು ಗರಿಷ್ಠ ಮುನ್ನೇಚ್ಚರಿಕೆಗಳನ್ನು ಕೆಳಗಿನ ಐ.ಎಸ್.ಕೋಡ್‌ಗಳನ್ವಯ ತಪ್ಪದೇ ಕೈಗೊಳ್ಳುವುದು.
   - IS:3764 -Safety code for Excavation work.
   - IS:3696 Part-I- Safety code for Scaffolds & Ladder.
   - IS:7293- Safety Code for working with Construction Machinery.
   - IS:7969- Safety Code for Storage & Handling of Building Materials.

(ಬಿ.ಎಚ್. ಮಂಜುನಾಥ)
ಮುಖ್ಯ ಅಭಿಯಂತರರು,

1. ಮಾನ್ಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರವರು, ಕರಾಪೊವ ಮತ್ತು ಮೂಸೌಅನಿನಿ, ಬೆಂಗಳೂರು ರವರಿಗೆ ಘನ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಅಧೀಕ್ಷಕ ಅಭಿಯಂತರರು (ಉ/ದ&ಕೇಂದ್ರ), ಗುಣ ನಿಯಂತ್ರಣ ಕರಾಪೊವ ಮತ್ತು ಮೂಸೌಅನಿನಿ, ಬೆಂಗಳೂರು, ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ನಿಗಮದ ಎಲ್ಲಾ ಕಾರ್ಯಪಾಲಕ ಇಂಜಿನಿಯರ್, ಕರಾಪೊವ ಮತ್ತು ಮೂಸೌಅನಿನಿ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ನಿಗಮದ ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರಾಪೊವ ಮತ್ತು ಮೂಸೌಅನಿನಿ ರವರಿಗೆ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ತಾಂತ್ರಿಕ ಸಹಾಯಕರು-(ಉ/ದ), ಕರಾಪೊವ ಮತ್ತು ಮೂಸೌಅನಿನಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಕಛೇರಿ ಪ್ರತಿ.